ಹೀಗಾಗಿ ರಸ್ತೆಗಳು ಹಾಳಾಗುತ್ತವೆ. ಅದರ ಮೇಲೆ ಟ್ಯಾಕ್ಸ್ ಹಾಕಿ, ಒಟ್ಟಾಗಿ ಕಾಫಿ ರೋಡ್ಸ್ ಎಂದು ಮಾಡುವುದಕ್ಕೆ ಏಕೆ ಪರಿಶೀಲನೆ ಮಾಡಬಾರದು.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಅದನ್ನು ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ರಸ್ತೆಗಳು

1835-ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಒಳಪಟ್ಟಿರುವ ರಸ್ತೆಗಳ ಉದ್ದಳತೆ ಎಷ್ಟು?

ಆ) ಜಿಲ್ಲಾ ಪರಿಷತ್ತಿಗೆ. ವಹಿಸಿದ ಬಳಿಕ ರಸ್ತೆಗಳು, ಹಣದ ಕೊರತೆಯಿಂದ ಹಳ್ಳಿ ಸಂಚಾರಕ್ಕೆ ಯೋಗ್ಯವಿಲ್ಲದಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ, ಆ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಈ) ಪ್ರತಿ ತಾಲ್ಲೂಕಿನಲ್ಲಿ 30 ಕಿಲೋಮೀಟರ್ ರಸ್ತೆಯನ್ನು ಜಿಲ್ಲಾ ಪರಿಷತ್ತಿನಿಂದ ಸರ್ಕಾರಕ್ಕೆ ವಹಿಸಿಕೊಳ್ಳುವ ಉದ್ದೇಶ ಸರ್ಕಾರ ಇಟ್ಟುಕೊಂಡಿದೆಯೇ?

ಉ) ಹಾಗಿದ್ದಲ್ಲಿ, ಅದನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು?

ಅ) ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಒಟ್ಟು ಉದ್ದ ಕೆಳಕಂಡಂತಿದೆ:

1)	ಇತರ ಜಿಲ್ಲಾರಸ್ತೆ:	76 ಕಿ.ಮೀ
2)	ಹಳ್ಳಿ ದರ್ಜಿ ರಸ್ತೆ	2156 ಕಿ.ಮೀ.
	ಒಟ್ಟು	2232 ಕಿ.ಮೀ.

ಆ) ಜಿಲ್ಲಾ ಪರಿಷತ್ತಿಗೆ ವಹಿಸಿದ ಎಲ್ಲಾ ರಸ್ತೆಗಳು ಸಂಚಾರಕ್ಕೆ ಯೋಗ್ಯವಿಲ್ಲ ಎಂಬುದು ಸರಿಯಲ್ಲ ಹಣದ ಕೊರತೆಯಿಂದ ಹಾಗೂ ಅತಿವೃಷ್ಟಿಯಿಂದ ಕೆಲವು ರಸ್ತೆಗಳು ದುಸ್ಥಿತಿಯಲ್ಲಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಲಭ್ಯವಿರುವ ಅನುದಾನದಲ್ಲಿ ರಸ್ತೆಗಳನ್ನು ಆದಷ್ಟು ಮಟ್ಟಿಗೆ ಸುಸ್ಥಿತಿಯಲ್ಲಿಡಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಈ ಸಾಲಿನಲ್ಲಿ ರಸ್ತೆ ನಿರ್ವಹಣೆಗೆ ಹೆಚ್ಚುವರಿ ಅನುದಾನ ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ) ಉದ್ದೇಶವಿದೆ.

ಉ) ಆದಷ್ಟು ಶೀಘ್ರದಲ್ಲಿ ಕಾರ್ಯರೂಪಕ್ಕೆ ತರಲಾಗುವುದು.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಹಳ್ಳಿದರ್ಜಿ ರಸ್ತೆ 2,156 ಕಿಲೋಮೀಟರ್ ಎಂದು ಹೇಳಿ ಬರೆದು, ಒಟ್ಟು 2,532 ಕಿಲೋಮೀಟರ್ ಎಂದು ಹೇಳಿದ್ದಾರೆ. ಇದು ನಾ ದುರಸ್ತಿಯಲ್ಲಿದೆ. ಹಣದ ಕೊರತೆಯಿಂದಲೋ ಏನೋ ಈ ರೀತಿ ಏಕೆ ಕೊರತೆಯಾಗಿದೆ. ಎಂದು ಕೇಳಿದ್ದಕ್ಕೆ, ಜಿಲ್ಲಾಪರಿಷತ್ತಿಗೆ ವಹಿಸಿದ ಎಲ್ಲಾ ರಸ್ತೆಗಳೂ ಸಂಚಾರಕ್ಕೆ ಯೋಗ್ಯವಿಲ್ಲ ಎಂಬುದು ಸರಿಯಲ್ಲ, ಹಣದ ಕೊರತೆಯಿಂದ ಹಾಗೂ ಅತಿವೃಷ್ಟಿಯಿಂದ ಕೆಲವು ರಸ್ತೆಗಳು ನಾ ದುಸ್ತಿತಿಯಲ್ಲಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳುತ್ತಿದ್ದಾರೆ. ನಾನು ಹೇಳುವುದು, 100ಕ್ಕೆ 95 ರಸ್ತೆಗಳು ದುರಸ್ತಿಯಲ್ಲಿವೆ,

ಹೊಂಡಗಳ ರಾಶಿಯೇ ಬಿದ್ದಿದೆ. ಗ್ರಾಮಾಂತರ ಪ್ರದೇಶದ ಯಾವ ರಸ್ತೆಗಳಿಗೂ ಪ್ರತಿನಿಧಿಗಳಾದಂಥ ನಾವು ಹೋಗಿ ಕಾಲಿಡುವುದಕ್ಕೆ ಸಾಧ್ಯವಿಲ್ಲ.

ಜನ ಮುತ್ತಿಗೆ ಹಾಕುತ್ತಾರೆ. ಏನು ಸ್ವಾಮಿ, ಇದೊಂದು ರಸ್ತೆಯನ್ನಾದರೂ ಸರಿಮಾಡುವುದಕ್ಕೆ ನಿಮ್ಮಿಂದ ಸಾಧ್ಯ ಇಲ್ಲದಿದ್ದರೆ ನೀವು ಮಾಡುವುದು ಆದರೂ ಏನೂ ಎಂದು ಕೇಳುತ್ತಾರೆ. ಆಗ ಅವರಿಗೆ ಯಾವ ಉತ್ತರವನ್ನೂ ಕೊಡುವುದಕ್ಕೆ ಆಗುವುದಿಲ್ಲ. ಆದುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ರಸ್ತೆಗಳು 100ಕ್ಕೆ 95ರಷ್ಟು ಹಾಳಾಗಿವೆ. ಹೊಂಡ ಬಿದ್ದಿವೆ, ಅದನ್ನು ರಿಪೇರಿ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಅಧ್ಯಕ್ಷರೇ ಕಾರ್ಯಕ್ರಮ ಇದೆ. ರಸ್ತೆ ರಿಪೇರಿ ಹಾಗೂ ಮೇಂಟೆನೆನ್ಸ್‌ಗೋಸ್ಕರ 40 ಕೋಟಿ ರೂಪಾಯಿಗಳನ್ನು ಸರಕಾರ ಖರ್ಚು ಮಾಡುತ್ತಿದೆ. ಆದರೆ ಇದು ಮಲೆನಾಡು ಪ್ರದೇಶವಾದುದರಿಂದ ಹೆಚ್ಚು ಹಣ ಬೇಕಾಗುತ್ತದೆ. ನಾನು ಆಗಲೇ ಉತ್ತರದಲ್ಲಿ ಹೇಳಿದಹಾಗೆ ಫ್ಲಡ್ ರಿಲೀಫ್ ಬಾಬತ್ತಿನಲ್ಲಿ ಹೆಚ್ಚಿನ ಹಣವನ್ನು ಸರಕಾರದಿಂದ ಪಡೆದು ಈ ಕೆಲಸ ಮಾಡಲು ಪ್ರಯತ್ನ ಮಾಡುತ್ತೇವೆ. ಸರ್ಕಾರದಿಂದ ಹೆಚ್ಚಿನ ಹಣವನ್ನು ತೆಗೆದುಕೊಂಡು, ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ರಸ್ತೆಗಳು ಏನು ಕೆಟ್ಟು ಹೋಗಿವೆ ಅದನ್ನು ರಿಪೇರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಎಂ. ಇದಿನಬ್ಬ : ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ದೊಡ್ಡ ತೊಂದರೆ ಎಂದರೆ ಲೆಕ್ಕಕ್ಕಿಂತ ಜಾಸ್ತಿ ಮಳೆ ಬರುವುದರಿಂದ ರಸ್ತೆಗಳಿಗೆ ಹಾನಿಯಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಜಿಲ್ಲಾ ಪರಿಷತ್‌ನವರು ಯಾವ ಕೆಲಸವನ್ನೂ ಮಾಡುವುದಕ್ಕೆ ಹೊರಟಂತೆ ಎಲ್ಲಿಯೂ ಕಾಣುವುದಿಲ್ಲ. ಆದುದರಿಂದ ಪ್ರಮುಖವಾದಂಥ ಗ್ರಾಮಾಂತರ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವ ಮನಸ್ಸು ಮಾಡುತ್ತೀರಾ? ಹಾಗೆ ಮಾಡಿದರೆ ನಿಜವಾಗಿ ಬಹಳ ದೊಡ್ಡ ಉಪಕಾರವಾಗುತ್ತದೆ.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಪ್ರಯತ್ನ ನಡೆಯುತ್ತಿದೆ. ಒಂದು ಜಿಲ್ಲೆಯಲ್ಲಿ ಸುಮಾರು 400 ಕಿಲೋಮೀಟರ್ ಜಿಲ್ಲಾ ಪರಿಷತ್ ರಸ್ತೆಯನ್ನು ಪಿ.ಡಬ್ಲ್ಯೂ.ಡಿ. ಇಲಾಖೆಗೆ ತೆಗೆದುಕೊಳ್ಳಬೇಕೆಂದು ಪ್ರಯತ್ನ ನಡೆಸಿದ್ದೇವೆ. ಅದಕ್ಕೆ ಕೆಲವು ಪ್ರಪೋಸಲ್ಸ್ ಕೂಡಾ ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯಿಂದಲೂ ಬಂದಿದೆ. ಅದನ್ನು ಶೀಘ್ರವಾಗಿ ಪರಿಶೀಲಿಸಿ ಜಿಲ್ಲಾ ಪರಿಷತ್ ರಸ್ತೆಗಳನ್ನು ಪಿ.ಡಬ್ಲ್ಯೂ.ಡಿ. ರಸ್ತೆಗಳನ್ನಾಗಿ ಪರಿವರ್ತನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್.ಹೆಚ್. ಕೌಜಲಗಿ : ಈ ವರ್ಷ ಜಿಲ್ಲಾ ಪರಿಷತ್‌ನಿಂದ ಎಷ್ಟು ಕಿಲೋಮೀಟರ್ ರಸ್ತೆಗಳನ್ನು ಪಿ.ಡಬ್ಲ್ಯೂಡಿಗೆ ತೆಗೆದುಕೊಳ್ಳುತ್ತೀರಿ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಕರ್ನಾಟಕ ರಾಜ್ಯದ ಎಲ್ಲಾ ತಾಲ್ಲೂಕುಗಳಿಂದ ಸೇರಿ, ಸುಮಾರು ಆರು ಸಾವಿರ ಕಿಲೋಮೀಟರ್ ತೆಗೆದುಕೊಳ್ಳಬೇಕೆಂದಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ : ಇದರ ಬಗ್ಗೆ ಬೇಗ ಆರ್ಡರ್ ಮಾಡುತ್ತೀರಾ? ಏಕೆಂದರೆ ಇದು ಒಂದು ವರ್ಷದಿಂದ ಪೆಂಡಿಂಗ್ ಇದೆ. ಹಿಂದೆ ಮಾನ್ಯ ಪುಟ್ಟಸ್ವಾಮಿಗೌಡರು ಮಂತ್ರಿಗಳಾಗಿದ್ದಾಗ ರೆಕಮೆಂಡೇಷನ್ ಮಾಡಿದ್ದರು. ಈ ಫೈಲ್ ಮಾನ್ಯ ಮುಖ್ಯಮಂತ್ರಿಗಳ ಟೇಬಲ್ ಮೇಲಿತ್ತು. ಈಗ ನಿಮ್ಮ ಟೇಬಲ್‌ಗೆ ಬಂದಿರಬಹುದು. ಎಷ್ಟು ದಿವಸದಲ್ಲಿ ತಾವು ಆರ್ಡರ್ ಮಾಡುತ್ತೀರಾ.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಅತೀ ಶೀಘ್ರವಾಗಿ ಮಾಡುತ್ತೇವೆ.

ಶ್ರೀ ಆರ್.ಎಲ್. ಜಾಲಪ್ಪ : ಎಷ್ಟು ಒಂದು ತಿಂಗಳೇ; ಎರಡು ತಿಂಗಳೇ, ಒಂದು ವರ್ಷವೇ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ನೋಡೋಣ.

ಶರಾವತಿ ಸೇತುವೆಯ ಮೇಲೆ ಭಾರಿ ವಾಹನಗಳ ಓಡಾಟವನ್ನು ನಿರ್ಬಂಧ

1912-ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಶರಾವತಿ ಸೇತುವೆಯ ಮೇಲೆ ಭಾರಿ ವಾಹನಗಳನ್ನು ನಿರ್ಬಂಧಿಸಿರುವುದು ನಿಜವಲ್ಲವೇ?*

ಆ) *ಹಾಗಿದ್ದಲ್ಲಿ, ಈ ನಿರ್ಬಂಧವನ್ನು ಎಂದಿನಿಂದ ಜಾರಿಗೊಳಿಸಲಾಗಿದೆ?*

ಇ) *ಈ ಸೇತುವೆಯ ಮೇಲಿನ ಸಂಚಾರವನ್ನು ನಿರ್ಬಂಧಿಸಿರುವುದರಿಂದ ಉತ್ತರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಸಂಪರ್ಕಕ್ಕೆ ವ್ಯಾಪಾರ ಜನಗಳ ಓಡಾಟಕ್ಕೆ ತೊಂದರೆಯಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಈ ಸೇತುವೆಯ ದುರಸ್ತಿ ಕಾರ್ಯವನ್ನು ಸಮರೋಪಾದಿಯಲ್ಲಿ ಮುಕ್ತಾಯಗೊಳಿಸಲು ಸರ್ಕಾರದ ಮುಂದಿನ ಕ್ರಮಗಳೇನು?*

ಉ) *ಈ ಸೇತುವೆಯ ದುರಸ್ತಿ ಕಾರ್ಯ ಮುಗಿಯುವವರೆಗೆ ಬದಲಿ ವ್ಯವಸ್ಥೆಯನ್ನೇನಾದರೂ ಸರ್ಕಾರದ ಮಾಡಿದೆಯೇ?*

ಊ) *ಮಾಡಿದ್ದಲ್ಲಿ ಆ ವ್ಯವಸ್ಥೆ ಯಾವುದು?*

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ನಿಜ

ಆ) ಈ ನಿರ್ಬಂಧವನ್ನು ದಿನಾಂಕ : 26-7-91ರಿಂದ ಜಾರಿಗೊಳಿಸಲಾಗಿದೆ.

ಇ) ಬಂದಿದೆ

ಈ) ಈ ಸೇತುವೆಯ ದುರಸ್ತಿ ಮಾಡಲು ವಿದೇಶಿ ತಂತ್ರಜ್ಞರ ಸಲಹೆಯನ್ನು ಪಡೆದು ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಕೇಂದ್ರ ಸರ್ಕಾರದ ಅನುಮತಿ ದೊರಕಿದನಂತರ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು.

ಉ) ಮಾಡಿದೆ

ಊ) ಹಾಲಿ ಇರುವ ಸೇತುವೆಯ ಮೇಲೆ ಹಗುರ ವಾಹನಗಳನ್ನು ಬಿಡಲಾಗುತ್ತಿದೆ ಮತ್ತು ಭಾರಿ ವಾಹನಗಳನ್ನು ಯಂತ್ರಚಾಲಿತ ದೋಣಿಗಳಲ್ಲಿ ಒಂದು ದಡದಿಂದ ಮತ್ತೊಂದು ಎಡಕ್ಕೆ ಕೊಂಡೊಯ್ಯಲು ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಎರಡು ಬದಲಿ ರಸ್ತೆಗಳನ್ನು ಅಭಿವೃದ್ಧಿಪಡಿಸುತ್ತಿದ್ದು, ಭಾರಿ ವಾಹನಗಳನ್ನು ಬದಲಿ ರಸ್ತೆಯಲ್ಲಿ ಬಿಡಲಾಗುತ್ತಿದೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ನನ್ನ ಎರಡನೇ ಪ್ರಶ್ನೆಗೆ ಉತ್ತರ ಕೊಡುವಾಗ ಕಮ್ಯುನಿಕೇಷನ್, ಟ್ರೇಡ್, ಪಬ್ಲಿಕ್ ಮೂವ್‌ಮೆಂಟ್‌ಗೆ ತೊಂದರೆಯಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ನಾನು ಇದೇ ಸದನಲ್ಲಿ 10-12 ತಿಂಗಳ ಹಿಂದೆ ಈ ವಿಷಯ ಪ್ರಸ್ತಾಪ ಮಾಡಿ ಆ ಸಮಯದಲ್ಲಿ ಸಹ ಹೇಳಿದ್ದೆ. ಈ ಸೇತುವೆಗೆ ರಿಪೇರಿ ಬಹಳ ಅವಶ್ಯಕವಾಗಿದೆ. ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೆ, ಕ್ರಮ ತೆಗೆದುಕೊಳ್ಳುತ್ತೇವೆಂದು ಸರಕಾರದವರು